

# ಮರಳು ದಿಣ್ಣೆ

■ ಅನು ಬೆಳ್ಳೆ

## ‘ಮೇನಕಾ’ ಬಂಗ್ಲೆಯಲ್ಲಿ ಲಹರಿ!

ಇನ್ಸ್‌ಪೆಕ್ಟರ್‌ನ ಮುಖ ಗಂಭೀರವಾಗಿಯೇ ಇತ್ತು. ಅಳುಕುತ್ತಲೇ ಒಳಗೆ ಬಂದು ನಿಂತ ಪಾಂಬುವನ್ನು ನೋಡಿದ ಅಧಿಕಾರಿ ಸೌಜನ್ಯದಿಂದ ಕೈ ಸಂಜ್ಞೆಯಲ್ಲಿಯೇ ಕುಳಿತು ಕೊಳ್ಳುವಂತೆ ಸೂಚಿಸಿದ. ತುಸು ಧೈರ್ಯ ತಂದುಕೊಂಡ ಪಾಂಬು ತನ್ನ ಕೆಂಪು ಹಲ್ಲುಗಳನ್ನು ಪ್ರದರ್ಶಿಸುತ್ತಾ ಕೃತಕ ನಗು ಬೀರಿದ.

‘ಪಾಂಬು, ಹಿತೇಶ ಕಾಣೆಯಾಗಿದ್ದಾನೇಂತ ಹೇಳ್ದೆ, ಯಾವಾಗಿನಿಂದ?’

ಪಾಂಬು ಮೆತ್ತನೆಯ ಚೇರ್‌ಗೆ ಅಂಡು ಊರಿ ಕುಳಿತ. ಅಧಿಕಾರಿಯ ಮೊದಲ ಪ್ರಶ್ನೆಯೇ ಅವನನ್ನು ತಲ್ಲಣಗೊಳಿಸಿತು. ನಿಖರವಾದ ದಿನ ಅವನಿಗೂ ತಿಳಿದಿಲ್ಲ. ತಬ್ಬಿಬ್ಬಾದವನು ಅಧಿಕಾರಿಯ ಮುಖವನ್ನು ನೋಡಿದ.

‘ಸಾಹೇಬ್ರೆ, ನಿಖರವಾಗಿ ಹೇಳಲಾರೆ. ನಾಲ್ಕು ದಿವಸದ ಹಿಂದಿನಿಂದ ಅವನು ಮರಳು ದಿಣ್ಣೆಯಲ್ಲಿ ಓಡಾಟ ನಡೆಸ್ತಿಲ್ಲ’

‘ಅಂದ್ರೆ, ಅವನು ಕಾಣೆಯಾಗಿದ್ದಾನೇಂತನಾ?’ ನಗುವಿತ್ತು ಅಧಿಕಾರಿಯ ಮುಖದಲ್ಲಿ.

‘ಹೌದು, ಲಹರಿಯ ಕಣ್ಮರೆಯ ಸಾಕ್ಷಿಯಾಗಬಲ್ಲ ಅವನು ನಿಗೂಢವಾಗಿ ಕಾಣೆಯಾಗಿದ್ದಾನೆ’

ಇನ್ಸ್‌ಪೆಕ್ಟರ್‌ನ ಮುಖದಲ್ಲಿ ಅದೇ ತೆಳು ನಗು ಮರೆಯಾಗಲಿಲ್ಲ. ಹಿತೇಶನ ಕಣ್ಮರೆ ಮತ್ತು ಕಾಕುಟ್ಟನ ಹೈದರಬಾದಿನ ಪಯಣ ಒಂದಕ್ಕೊಂದು ತಳುಕು ಹಾಕಿದಂತಿದೆ. ಹಿತೇಶನಿಗಿಂತಲೂ ಮುಖ್ಯವಾದ ಸಾಕ್ಷಿ ಕಾಕುಟ್ಟ!

‘ಪಾಂಬು, ನೀನೂ ಹಿತೇಶನ ಜೊತೆಗೆ ಓಡಾಡಿಕೊಂಡಿರುವುದನ್ನ ನೋಡಿದೋರು ಅನೇಕ ಮಂದಿ ಇದ್ದಾರೆ. ಅವರಲ್ಲಿ ನಿನ್ನ ಆಪ್ತ ಗೆಳೆಯ ಮುತ್ತುಚಾಂಡಿಯೂ ಒಬ್ಬ’ ಇನ್ಸ್‌ಪೆಕ್ಟರ್‌ಗೆ ಹೊರಗೆ ಮುತ್ತುಚಾಂಡಿಯಿರುವ ವಿಷಯ ತಿಳಿದಿರಲಿಲ್ಲ. ಪಾಂಬುವಿನ ಮುಖದಲ್ಲಿ ಯಾವುದೇ ಬದಲಾವಣೆ ಗೋಚರಿಸಲಿಲ್ಲ. ತಾನು ತಪ್ಪಿತಸ್ಥನೆನ್ನುವುದನ್ನು ಒಪ್ಪಿಕೊಳ್ಳಲು ತಯಾರಾಗಿದ್ದ. ಇದಕ್ಕೆ ಮುತ್ತುಚಾಂಡಿ ಕೂಡ ಪ್ರೇರಣೆ ನೀಡಿದ್ದ.

‘ಹೌದು, ನಾನು ಹಿತೇಶನ ಜೊತೆಗೆ ಓಡಾಡಿಕೊಂಡಿದ್ದೆ. ಆದರೆ ಒಬ್ಬ ನಿರಪರಾಧಿಯನ್ನ ಅಪರಾಧಿಯನ್ನಾಗಿಸುವುದು ಘೋರವಾದ ಅನ್ಯಾಯ. ಅದಕ್ಕಾಗಿ ನಾನು ಹಿತೇಶನನ್ನ ನಿಮಗೆ ಪರಿಚಯಿಸಿರಲಿಲ್ಲ’

ಅಧಿಕಾರಿಯ ಮುಖ ಕಪ್ಪಿಟ್ಟಿತು. ಪಾಂಬುವನ್ನು ದಿಟ್ಟಿಸಿ ನೋಡಿದ.

‘ಪಾಂಬು, ಇದು ನಿನ್ನ ಉದ್ಧಟತನದ ಮಾತು. ಅಪರಾಧಿ ನಿರಪರಾಧಿ ಅನ್ನೋದನ್ನ ನೋಡೋದಿಕ್ಕೆ ಠಾಣೆಯಿದೆ, ಕೋರ್ಟ್ ಇದೆ. ಅದಕ್ಕಿಂತಲೂ ಮುಖ್ಯವಾಗಿ ಕಾನೂನಿನ ವ್ಯವಸ್ಥೆಯಿದೆ. ಅದನ್ನು ನಿರ್ಧರಿಸೋದಿಕ್ಕೆ ನೀನು ನಿನ್ನ ಸಮಯವನ್ನು ಹಾಳು ಮಾಡುವ ಅವಶ್ಯಕತೆಯೇನಿತ್ತು?’

ಪಾಂಬುವಿಗೆ ಕ್ಷಮಾಪಣೆ ಕೇಳುವುದು ಬಿಟ್ಟರೆ ಬೇರೆ ದಾರಿಯಿರಲಿಲ್ಲ. ಆದರೂ ಇನ್ಸ್‌ಪೆಕ್ಟರ್‌ಗೆ ನಿಜ ಸಂಗತಿಯನ್ನು ತಿಳಿಸುವ ಉದ್ದೇಶದಿಂದ ಮಾತು ಮುಂದುವರಿಸಿದ.

‘ಹಿತೇಶ ಸಾಧು ಸ್ವಭಾವದ ಮನುಷ್ಯ. ಅವನಿಗೆ ಮೋಸ ಗೊತ್ತಿಲ್ಲ. ಆತ ನಿಜವಾಗಿಯೂ ಲಹರಿಯನ್ನ ಪ್ರೀತಿಸ್ತಿದ್ದ. ಆದರೆ...’ ಮಾತು ನಿಲ್ಲಿಸಿದ. ಅಲ್ಲಿಯೂ ಅವನಿಗೆ ವಿಷಯವನ್ನು ಹೇಳಬೇಕೆ, ಬೇಡವೇ ಅನ್ನುವ ಗೊಂದಲವಿತ್ತು.

‘ಆದರೆ ಏನಾಯ್ತು?’ ಇನ್ಸ್‌ಪೆಕ್ಟರ್‌ನ ಮುಖದಲ್ಲಿ ಗಂಭೀರತೆ ಕರಗಿ ಆ ವಿಷಯ ತನಗೆ ಗೊತ್ತಿದೆಯೆನ್ನುವಂತೆ ಮತ್ತೆ ತೆಳು ನಗುವೊಂದು ಮೂಡಿತು.

‘ಲಹರಿಯ ಹಿಂದೆ ಮರಳುದಿಣ್ಣೆಯಯಲ್ಲಿ ಓಡಾಡ್ತಿದ್ದೋನು ಮತ್ತೊಬ್ಬ’